ಕಲಘಟಗಿ – ಬೆಂಗಳೂರು ನಡುವೆ ಮುಂಡಗೋಡ್ ಮಾರ್ಗವಾಗಿ ಸಂಚರಿಸುವ ಬಸ್ಸುಗಳು

464 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ಬೆಂಗಳೂರು ನಡುವೆ ಪ್ರತಿ ದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿರುವುದು.*

ಆ) *ಅವುಗಳ ಪೈಕಿ ಎಷ್ಟು ಬಸ್ಸುಗಳು ಮುಂಡಗೋಡ ಮಾರ್ಗವಾಗಿ ಸಂಚರಿಸುತ್ತಿವೆ,*

ಇ) *ಬೆಂಗಳೂರು ನಗರಿಂದ ಕಲಘಟಗಿ ಮುಂಡಗೋಡ ಮಾರ್ಗವಾಗಿ ನೇರ ಬಸ್ ಸೌಕರ್ಯವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಹಳಿಯಾಳ ಮತ್ತು ಬೆಂಗಳೂರು ನಡುವೆ ಓಡುವ ಎರಡು ಬಸ್ಸುಗಳು ಕಲಘಟಗಿ ಮಾರ್ಗವಾಗಿ ನಿತ್ಯವೂ ಸಂಚರಿಸುತ್ತಿವೆ.

ಆ) ಹಳಿಯಾಳ ಮತ್ತು ಬೆಂಗಳೂರು ನಡುವೆ ಕಲಘಟಗಿ ಮತ್ತು ಮುಂಡಗೋಡ ಮಾರ್ಗವಾಗಿ ಒಂದು ಬಸ್ಸನ್ನು ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿದೆ.

ಇ) ಈ ಮಾರ್ಗದಲ್ಲಿ ಪ್ರಯಾಣಿಕರ ಸಂಚಾರ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದರಿಂದ ನೇರ ಬಸ್ ಸೌಕರ್ಯವನ್ನು ಒದಗಿಸುವುದು ಸಮಂಜಸವಲ್ಲ ಎಂದು ಪರಿಗಣಿಸಲಾಗಿದೆ.

ಕಲಘಟಗಿ – ಹುಬ್ಬಳ್ಳಿ ನಡುವೆ ಬಸ್ಸುಗಳನ್ನು ಓಡಿಸುವುದು

466 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ಹುಬ್ಬಳ್ಳಿಗಳ ನಡುವೆ ಪ್ರತಿದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿವೆ;*

ಆ) *ಪ್ರಯಾಣಿಕರ ಒತ್ತಡ ಹೆಚ್ಚುತ್ತಿರುವುದರಿಂದ ಹೊಸದಾಗಿ ಇನ್ನೂ 4 ಬಸ್ಸುಗಳನ್ನು ಕಲಘಟಗಿ-ಹುಬ್ಬಳ್ಳಿ ನಡುವೆ ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) 36 ಬಸ್ಸುಗಳು.

ಆ) ಈಗಾಗಲೇ ಫೆಬ್ರವರಿ ತಿಂಗಳು 1994ರಲ್ಲಿ ಒಂದು ಹೆಚ್ಚುವರಿ ಅನುಸೂಚಿಯನ್ನು ಪ್ರಾರಂಭಿಸಿದ್ದು 7 ಸುತ್ತುವಳಿ ಟ್ರಿಪ್ಪುಗಳನ್ನು ಅಳವಡಿಸಲಾಗಿದೆ.

ಕಲಘಟಗಿ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಸೌಲಭ್ಯ

467 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರು, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಹಾಗಿದ್ದಲ್ಲಿ ಅವುಗಳನ್ನು ಅಲ್ಲಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ, ಒದಗಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.